## ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀಮತಿ ಭಾರತಿ ಶೆಟ್ಟಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 771

ಉತ್ತರಿಸಬೇಕಾದ ದಿನಾಂಕ : 23.07.2024

ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಮೈಸೂರಿನಲ್ಲಿರುವ ಕರ್ನಾಟಕ ರಾಜ್ಯ ಕಾಲೇಜು ಅಧ್ಯಾಪಕರ ಹಾಗೂ ಶಾಲಾ ಶಿಕ್ಷಕರ ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ ಭಾರಿ ಅಕ್ರಮ ನಡೆದಿದ್ದು, ಈ ಬಗ್ಗೆ 64ರ ತನಿಖೆ ನಡೆಯುತ್ತಿದ್ದು, ಈ ಸೊಸೈಟಿ ಸದಸ್ಯರ ನ್ಯಾಯವಾದ ಹಕ್ಕುಗಳನ್ನು ಸರ್ಕಾರ ಕಾಪಾಡುವ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ; | ಕರ್ನಾಟಕ ರಾಜ್ಯ ಕಾಲೇಜು ಅಧ್ಯಾಪಕರ ಹಾಗೂ ಶಾಲಾ ಶಿಕ್ಷಕರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಮೈಸೂರು ಈ ಸಂಘದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಬಗ್ಗೆ ಸಂಘದ ಸದಸ್ಯರು ಸಲ್ಲಿಸಿದ್ದ ದೂರಿನ ಆಧಾರದ ಮೇಲೆ ದಿನಾಂಕ:15.04.2021 ರಲ್ಲಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 64 ರಡಿ ವಿಚಾರಣೆಗೆ ಆದೇಶಿಸಲಾಗಿತ್ತು. ಸದರಿ ಆದೇಶವನ್ನು ಪ್ರಶ್ನಿಸಿ ಸಂಘವು ಗೌ: ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:8588/2021 (ಸಿಎಸ್-ಆರ್‌ಇಎಸ್) ನ್ನು ದಾಖಲಿಸಿದ್ದು, ದಿನಾಂಕ:28.04.2021 ರ ಗೌ:ಉಚ್ಚ ನ್ಯಾಯಾಲಯದ ಮಧ್ಯಂತರ ಆದೇಶದಲ್ಲಿ ಕಲಂ 64ರ ವಿಚಾರಣೆಗೆ ತಡೆಯಾಜ್ಞೆ ನೀಡಿರುತ್ತದೆ. ಈ ಸಂಬಂಧ ಇಲಾಖಾವತಿಯಿಂದ ಕಂಡಿಕೆವಾರು ಷರಾ ಹಾಗೂ ಆಕ್ಷೇಪಣಾ ಹೇಳಿಕೆಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿದ್ದು, ನಂತರ ದಿನಾಂಕ:01-02-2024 ರ ಗೌ:ಉಚ್ಚ ನ್ಯಾಯಾಲಯದ ಆದೇಶದಲ್ಲಿ ಕಲಂ 64ರ ವಿಚಾರಣಾ ಆದೇಶವನ್ನು ಪ್ರಶ್ನಿಸಿ ಸಂಘವು ದಾಖಲಿಸಿದ್ದ ರಿಟ್ ಅರ್ಜಿಯನ್ನು ಮಾನ್ಯ ನ್ಯಾಯಾಲಯವು ವಜಾಗೊಳಿಸಿ ಆದೇಶಿಸಿರುತ್ತದೆ. ಈ ಹಿನ್ನಲೆಯಲ್ಲಿ ವಿಚಾರಣಾಧಿಕಾರಿಗಳಾದ ಶ್ರೀ ಪಿ.ಶಶಿಧರ್, ಸಹಕಾರ ಸಂಘಗಳ ಉಪ ನಿಬಂಧಕರು, 4ನೇ ವಲಯ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಇವರು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 64 ರಡಿ ವಿಚಾರಣೆಯನ್ನು ಪ್ರಾರಂಭಿಸಿರುತ್ತಾರೆ.<br><br>ಮುಂದುವರೆದು ಸಂಘದ ಸದಸ್ಯರು ಸಲ್ಲಿಸಿದ ಹೆಚ್ಚುವರಿ ಆರೋಪಗಳ ಸಂಬಂಧ ಪರಿಶೀಲಿಸಿ, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 64 ರಡಿ ಹೆಚ್ಚುವರಿ ವಿಚಾರಣಾ ಅಂಶಗಳನ್ನು ನಿಗದಿಪಡಿಸಿ ದಿನಾಂಕ:14.05.2024 ರಂದು ಆದೇಶಿಸಿದ್ದು, ವಿಚಾರಣೆಯು ಪ್ರಗತಿಯಲ್ಲಿರುತ್ತದೆ. |
| ಆ) | ಮೈಸೂರಿನಲ್ಲಿರುವ ಕೂಡಲ ಸಂಗಮ ದೇವಾ ಗೃಹ ನಿರ್ಮಾಣ ಸಹಕಾರ ಸಂಘ ಅಸ್ತಿತ್ವಕ್ಕೆ ಬಂದು 14 ವರ್ಷಗಳಾಗಿದ್ದು, ಸದಸ್ಯರಿಂದ ಹಣ ಪಡೆದು ಇನ್ನೂ ನಿವೇಶನಗಳನ್ನು ಹಂಚಿಕೆ ಮಾಡದೆ ಸೊಸೈಟಿ ಅಧ್ಯಕ್ಷರು | ಕೂಡಲ ಸಂಗಮ ದೇವಾ ಗೃಹ ನಿರ್ಮಾಣ ಸಹಕಾರ ಸಂಘ ನಿ., ಮೈಸೂರು ಈ ಸಂಘವು ಸದಸ್ಯರಿಂದ ಹಣ ಪಡೆದು ಇನ್ನೂ ನಿವೇಶನಗಳನ್ನು ಹಂಚಿಕೆ ಮಾಡದೆ ಸಂಘದ ಅಧ್ಯಕ್ಷರು ಹಣ ದುರುಪಯೋಗ ಪಡಿಸಿಕೊಂಡಿದ್ದಾರೆಂಬ ಬಗ್ಗೆ ನಿಖರವಾಗಿ ಆರೋಪಿಸಿ ದೂರುಗಳು ಸ್ವೀಕೃತವಾಗಿರುವುದು ವರದಿಯಾಗಿರುವುದಿಲ್ಲ.<br><br>ಆದರೆ ಸಂಘದ ಇನ್ನಿತರೆ ವಿಷಯಗಳು ಅಂದರೆ ಕರಾರು ಉಲ್ಲಂಘನೆ, ಆಡಳಿತಾತ್ಮಕ ವಿಷಯ, ಗುತ್ತಿಗೆದಾರರಿಗೆ ಹಣ ಪಾವತಿ ಇತ್ಯಾದಿ |

| | | |
|---|---|---|
| | ಹಣ ದುರುಪಯೋಗ ಪಡಿಸಿಕೊಂಡಿದ್ದಾರೆಂಬ ದೂರು ಬಂದಿದ್ದು, ಇದರಿಂದ ಈ ಸೊಸೈಟಿ ಸದಸ್ಯರುಗಳಿಗೆ ಅನ್ಯಾಯವಾಗಿದ್ದು, ಈ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ? | ಆರೋಪಗಳ ಸಂಬಂಧ ದೂರು ಅರ್ಜಿಗಳು ಸ್ವೀಕೃತವಾಗಿದ್ದು, ಸದರಿ ದೂರು ಅರ್ಜಿಯಲ್ಲಿನ ಅಂಶಗಳ ಬಗ್ಗೆ ಪರಿಶೀಲಿಸಿ, ಕಲಂ 64 ರ ವಿಚಾರಣೆ ನಡೆಸಿ, ವಿಚಾರಣಾ ವರದಿಯ ಮೇಲೆ ಕಲಂ 68 ರಡಿ ಆದೇಶ ಹೊರಡಿಸಿ ಅನುಪಾಲನಾ ವರದಿಯನ್ನು ಸಲ್ಲಿಸಲು ಸಂಘದವರಿಗೆ ಸೂಚಿಸಲಾಗಿರುತ್ತದೆ. ಸಂಘವು ಸಲ್ಲಿಸಿದ್ದ ಅನುಪಾಲನಾ ವರದಿಯು ಅಪೂರ್ಣವಾಗಿದ್ದ ಕಾರಣ ಆಡಳಿತ ಮಂಡಳಿಯ ವಿರುದ್ಧ ಸ್ವಯಂ ಪ್ರೇರಿತವಾಗಿ 29 ಸಿ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ಕೈಗೆತ್ತಿಕೊಳ್ಳಲಾಗಿರುತ್ತದೆ.<br><br>ಸಂಘದಲ್ಲಿ ಒಟ್ಟು 855 ಸದಸ್ಯರುಗಳಿದ್ದು, ಈ ಪೈಕಿ 113 ಸದಸ್ಯರುಗಳಿಂದ ಸುಮಾರು ರೂ.10.65ಕೋಟಿ ನಿವೇಶನ ಮುಂಗಡ ಹಣವನ್ನು ಪಾವತಿಸಿಕೊಂಡಿರುತ್ತಾರೆ. ಈ ಸಂಬಂಧ ಸಂಘವು ಅಭಿವೃದ್ಧಿಪಡಿಸುತ್ತಿರುವ ಬಡಾವಣೆಗಳ ವಿವರ ಕೆಳಕಂಡಂತಿದೆ.<br><br>• ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ನಗರ್ತಹಳ್ಳಿ ಗ್ರಾಮದ ಸರ್ವೆ ನಂಬರ್ 102/1 ಮತ್ತು 102/2 ರಲ್ಲಿ ಒಟ್ಟು 3 ಎಕರೆ 32 ಗುಂಟೆ ಜಮೀನನ್ನು ಸಂಘದಿಂದ ನೇರವಾಗಿ ಖರೀದಿಸಿ ಮೊದಲನೇ ಹಂತದ ಬಡಾವಣೆಯಾಗಿ ನಿರ್ಮಿಸಲು ಉದ್ದೇಶಿಸಿ, ಸದರಿ ಬಡಾವಣೆಗೆ ಸಂಬಂಧಿಸಿದಂತೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ಇವರಿಂದ ಆದೇಶ ಸಂಖ್ಯೆ: ಮೈನಪ್ರಾ/ನಯೋ/ವಿ.ನ/64/2021-22, ದಿನಾಂಕ: 27.08.2021 ರ ರೀತ್ಯಾ ತಾತ್ಕಾಲಿಕ ನಕ್ಷೆಗೆ ಅನುಮೋದನೆ ಪಡೆದಿದ್ದು, ನಕ್ಷೆಯಂತೆ ವಿವಿಧ ಅಳತೆಗಳ ಒಟ್ಟು 64 ನಿವೇಶನಗಳು ಲಭ್ಯವಾಗುತ್ತವೆ. ಸದರಿ ಬಡಾವಣೆಯ ಕೆಲಸಗಳನ್ನು ಅಭಿವೃದ್ಧಿ ಪಡಿಸಲು ಮೆ॥ ಪೂರ್ಣಿಮ ಡೆವಲಪರ್ಸ್, ಮೈಸೂರು ಇವರೊಂದಿಗೆ ದಿನಾಂಕ: 3.11.2012 ರಂದು ಎಂ.ಓ.ಯು ಮಾಡಿಕೊಂಡಿದ್ದು, ಬಡಾವಣೆ ಕಾರ್ಯ ಪ್ರಗತಿಯಲ್ಲಿರುತ್ತದೆ.<br><br>• ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಕೇರ್ಗಳ್ಳಿ ಗ್ರಾಮದ ಸರ್ವೆ ನಂಬರ್ 150/3 ಎ ರಲ್ಲಿನ 33.08 ಗುಂಟೆ ಜಮೀನನ್ನು ಸಂಘವು ದಿನಾಂಕ:23.11.2023 ರಂದು ಖರೀದಿಸಿರುತ್ತದೆ. ಸದರಿ ಜಮೀನು ಸಹ ಬಡಾವಣೆ ಅಭಿವೃದ್ಧಿಗೆ ಬಾಕಿ ಇರುತ್ತದೆ.<br><br>• ದಿನಾಂಕ: 27.01.2015 ರಂದು ಸಂಘದ ಅಭಿವೃದ್ಧಿದಾರರಾದ ಪೂರ್ಣಿಮ ಡೆವಲಪರ್ಸ್, ಮೈಸೂರು ಮತ್ತು ಭೂ-ಮಾಲೀಕರ ನಡುವೆ 6 ಎಕರೆ 25 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಕರಾರು ಆಗಿದ್ದು, ಸದರಿ ಜಮೀನು ಸಹ ಬಡಾವಣೆ ಅಭಿವೃದ್ಧಿಗೆ ಬಾಕಿ ಇರುತ್ತದೆ.<br><br>ಸಂಘವು ಮೇಲ್ಕಂಡ ಜಮೀನುಗಳನ್ನು ಅಭಿವೃದ್ಧಿಪಡಿಸಿ, ಸಕ್ಷಮ ಪ್ರಾಧಿಕಾರಗಳಿಂದ ಅನುಮೋದನೆ ಪಡೆದುಕೊಂಡು ನಿವೇಶನ ರಚಿಸಿ, ಅರ್ಹ ನೈಜ ಸದಸ್ಯರ ಹಾಗೂ ನಿವೇಶನ ಠೇವಣಿದಾರರ ಜೇಷ್ಠತಾ ಪಟ್ಟಿಯನ್ನು ತಯಾರಿಸಿ ಇಲಾಖೆಯಿಂದ ಜೇಷ್ಠತಾ ಪಟ್ಟಿಗೆ ಅನುಮೋದನೆ ಪಡೆದು ನಿವೇಶನ ಹಂಚಿಕೆ ಮಾಡಬೇಕಾಗಿರುತ್ತದೆ. |

**ಸಿಒ 28 ಸಿಹೆಚ್ಎಸ್ 2024 (ಇ)**

K.N. Rajanna

**(ಕೆ. ಎನ್. ರಾಜಣ್ಣ)**
**ಸಹಕಾರ ಸಚಿವರು**